R No KRNN 12

10-3-1975

ಸ್ವರ್ಣ ಮಹೋತ್ಸವ ನೆರವೇರಿದ ಪತ್ರಿಕೆ

in ★ ★ ★ ★ ★

58 th Year ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper

Satyavadi Daily Mysore 4

– For Influential Publicity

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಸ್ಥಾಪನಾಚಾರ್ಯ ಎಂ. ಎಸ್. ಕೃಷ್ಣರಾವ್ (3 ಕ.ಸ)

ಜೆ. ಪಿ ಯೊಡನೆ ಮಾತುಕತೆಗೆ ಸಿದ್ಧ

ಎಕ್ಸಿಕ್ಯುಟೀವ್ ಇಂಜಿನಿಯರ್‌ರವರ
ಕಛೇರಿ. ಕಬಿನಿ ಕಾಲುವೆ ವಿಭಾಗ,
ವಿ. ವಿ. ಮೊಹಲ್ಲ, ಮೈಸೂರು – 2.

ತಿದ್ದುಪಡಿ

ವಿಷಯ :— ಸಂಕ್ಷಿಪ್ತ ಟೆಂಡರ್ ಪ್ರಕಟಣೆ ನಂ 23/74-75 ರ ಬಗ್ಗೆ ಕಾಲವನ್ನು ವಿಸ್ತರಿಸುವ ಪ್ರಕಟಣೆ.

ತಾ 5-2-1975

ರೆಫರೆನ್ಸ್ :— ಈ ಕಛೇರಿ ಪತ್ರದ ನಂ. ಕೆಸಿಡಿ/ಡಬ್ಲ್ಯು3/ಎಚ್‌ಪಿ/ಟೆಂಡರ್/74-75/10655-67

ತಾ 6-2-1975

ಪ್ರಕಟಣೆ ನಂ. 23/74-75 ತಾ. 5-2-75 ಇದರಲ್ಲಿ ಪ್ರಕಟವಾಗಿರುವ ಕೆಲಸಗಳಿಗೆ ಟೆಂಡರ್‌ಗಳನ್ನು ಸ್ವೀಕರಿಸುವ ತಾ 6-3-75 ರ ಬದಲು 14-3-75 ರ ಮಧ್ಯಾಹ್ನ 4 ಗಂಟೆಗೆ ಮುಂದೂಡಲಾಗಿದೆ ಮತ್ತು 28-2-75 ರಿಂದ 4-3-75 ರ ವರೆಗಿನ ಬದಲು 10-3-75 ರಿಂದ 12-3-75 ರ ವರೆಗೆ ಟೆಂಡರ್ ಫಾರಂಗಳನ್ನು ಕೊಡಲಾಗುವುದು ಟೆಂಡರ್‌ನ ಇತರ ಷರತ್ತುಗಳು ಬದಲಾವಣೆ ಆಗದೆ ಹಾಗೆಯೇ ಇದೆ

ಸಹಿ/- ಹೆಚ್ ಎಸ್ ಭಟ್,
ಎಕ್ಸಿಕ್ಯುಟೀವ್ ಇಂಜಿನಿಯರ್

ಪ್ರಧಾನಿಯರಿಗೆ ಬಂದ ಪಾರಿತೋಷಕಗಳು

ನವದೆಹಲಿ– ಪ್ರಧಾನಿಯವರಿಗೆ ಬಂದ ಪಾರಿತೋಷಕಗಳಲ್ಲಿ ಕೆಲವು ಜುಜುಬಿ ಬೆಲೆಯ ವಸ್ತುಗಳನ್ನು ಸಚಿವೆನಿಸಿಗಾಗಿ ಸಮಂಜಸ ನಿಯಮಗಳಂತೆ ಪ್ರಧಾನಿಯವರು ತಮ್ಮಲ್ಲಿ ಇಟ್ಟುಕೊಂಡಿರುವೆಂದೂ ಅವರ ಅಧಿಕೃತ ಪದವಿಯಲ್ಲಿ ಅಗಾಗ್ಗೆ ವಿದೇಶಿ ಗಣ್ಯರಿಂದ ಪಡೆಯುದನ್ನು ತೋಷಖಾನೆಗೆ ಕೊಡಲಾಗಿದೆ ಅಥವಾ ಪ್ರಧಾನಿಯವರ ನಿವಾಸದಲ್ಲಿ ಪ್ರದರ್ಶಿಸಲಾಗಿದೆಯೆಂದೂ ರಾಜ್ಯಸಭೆಯಲ್ಲಿ ತಿಳಿಸಲಾಯ್ತು

ಉದ್ಯೋಗ ದೊರಕಿದೆ

ಕಳೆದ ಫೆಬ್ರವರಿ ತಿಂಗಳಿನಲ್ಲಿ ಹುಬ್ಬಳ್ಳಿ ಉದ್ಯೋಗ ವಿನಿಮಯಕೇಂದ್ರದಿಂದ 110 ಜನರಿಗೆ ಉದ್ಯೋಗ ದೊರಕಿದೆ

★

ಕಂದಾಯ ಮಂತ್ರಿಗಳು

ಈ ತಿಂಗಳು 11 ರಂದು ಕಂದಾಯ ಮಂತ್ರಿ ಶ್ರೀ ಎಸ್ ಹುಚ್ಚಮಾಸ್ತಿಗೌಡರು ಪುಲಿ ಮಹದೇಶ್ವರ ಬೆಟ್ಟಕ್ಕೆ ಭೇಟಿ ನೀಡುವರು ಮಾರನೆಯ ದಿನ ಯಡಪಟಾನೆಯಲ್ಲಿ ಏರ್ಪಡಿಸಿರುವ ಸತ್ಕಾರಕೂಟದಲ್ಲಿ ಭಾಗವಹಿಸುವರು

★

ಹರಿಜನ ಸಮ್ಮೇಳನ

ನಾಳೆ ಮಂತ್ರಿ ಶ್ರೀ ಎನ್ ಶಾಚಯ್ಯನವರು ಮೈಸೂರು ನಗರದಲ್ಲಿ ಹರಿಜನ ಸಮ್ಮೇಳನದ ಅಧ್ಯಕ್ಷತೆ ವಹಿಸುವರು

●

ಫ್ರಾನ್ಸಿನಲ್ಲಿ

ಫ್ರಾನ್ಸಿನ ಮಹಿಳಾ ವಿಚಾರಣಾ ಸಂಸ್ಥಾನದ ಕಾರ್ಯದರ್ಶಿ ಶ್ರೀಮತಿ ಫ್ರಾಂಕಾಯಿಸ್ ಗಿರೂಡರು, ಪುನರುಜ್ಜೀವನಗೊಳಿಸುವ ವಾಗ್ದಾನದ ಸೌಂದರ್ಯ ವಸ್ತುಗಳ ಜಾಹೀರಾತು ಪ್ರಕಟಣೆ ಪ್ರತಿಬಂಧಿಸಿದ್ದಾರೆ ಮಹಿಳೆಯರು ಪುರುಷರಿಂದ ಕೀಳು ಎಂಬ ಭಾವನೆಗಳನ್ನು ತೆಗೆದು ಹಾಕಲು ಶಾಲೆಯ ಪಠ್ಯಪುಸ್ತಕಗಳನ್ನು ಪುನರ್ವಿಮರ್ಶಿಸಲಾಗುವುದೆಂದು ಹೇಳಿಕೆ ಆಗಿದೆ.

○

ಹಾಂಕಾಂಗಿನ ಹತ್ತು ಪತ್ರಿಕೆಗಳು ವಿವಿಧ ಕಾರಣಗಳಿಗಾಗಿ ಕಳೆದ ವರ್ಷ ನಿಂತು ಹೋಗಿವೆ.

●

ಕೆನಡಾದ ಅತಿ ಹಳೆ ಪತ್ರಿಕೆ ಸಾಟರ್ಡೆ ನೈಟ್ ಪ್ರಕಟಣೆ ನಿಲ್ಲಿಸಿದೆ.

ಪರಭಾರೆ ನಿರೋಧ

ಬೆಂಗಳೂರು — ಪಟ್ಟಣಗಳ ಸ್ಥಿರಸ್ವತ್ತುಗಳ ಪರಭಾರೆ ಪ್ರತಿಬಂಧಿಸುವ ಮಸೂದೆಯನ್ನು ಈ ಅಧಿವೇಶನದಲ್ಲಿ ಪರಿಲಾಗುವದೆಂದು ಶಾಸನ ಸಭೆಯಲ್ಲಿ ತಿಳಿಸಲಾಯಿತು.

○

ಜನತಾ ಜಾತಾ

ಪುಣೆ — ದೆಹಲಿಯ ಐತಿಹಾಸಿಕ ಜನತಾ ಜಾತಾದಂತೆ ಬೊಂಬಾಯಿನಲ್ಲಿ ಏಪ್ರಿಲು 2 ಅಥವಾ 3 ರಂದು ಜನತಾ ಜಾತಾ ನಡೆಸಲಾಗುತ್ತದೆಂದು ಜನಸಂಘ ಶಾಸಕ ಶ್ರೀ ಆರ್ ಕೆ ತುಪಾಲ್ಜಿ ಪತ್ರಿಕೆಯವರಿಗೆ ತಿಳಿಸಿದರು.

★

ಮಾತುಕತೆಗೆ ಸಿದ್ಧ

ಕೋಝಿಕೋಡ್ — ತಮ್ಮ ಪಕ್ಷವು ಶ್ರೀ ಜಯಪ್ರಕಾಶ ನಾರಾಯಣರೊಡನೆ ಚುನಾವಣೆ ಸುಧಾರಣೆಗಳಂಥಹ ಪ್ರಮುಖ ರಾಷ್ಟ್ರೀಯ ಸಮಸ್ಯೆಗಳ ವಿಚಾರದಲ್ಲಿ ಮಾತುಕತೆ ಪಡೆಸಲು ಸಿದ್ಧವೆಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ಬರೂವಾ ತಿಳಿಸಿದರು ಮಾತುಕತೆಗೆ ಬಿಹಾರು ಶಾಸನ ಸಭೆ ವಿಸರ್ಜನೆ ಹರತ್ತಿಗೆ ತಾವು ಒಪ್ಪುವುದಿಲ್ಲ ಎಂದು ಅವರು ತಿಳಿಸಿದರು

○

ಖಾಲಿ ನಿವೇಶನದ ಮೇಲೆ ನಿಯಂತ್ರಣ

ನವ ದೆಹಲಿ — ಪಟ್ಟಣ ಭಾಗಗಳಲ್ಲಿಯ ಖಾಲಿ ಭೂಮಿ ಮೇಲೆ ಮಾತ್ರ ಪರಿಮಿತ ವಿಧಿಸಲು ಭಾರತ ಸರ್ಕಾರ ಚಿಂತನೆ ಪಡಿದೆ

● ಶ್ರೀ ಶಂಕರ ಭಗವತ್ಪಾದರ ಬೋಧನೆ ಅನುಸರಿಸುವಂತೆ ಶ್ರೀ ಶೃಂಗೇರಿ ಜಗದ್ಗುರುಗಳವರು ಮುಂಗಳೂರಿನಲ್ಲಿ ಸಾರ್ವಜನಿಕ ಸ್ವಾಗತಕ್ಕೆ ಉತ್ತರಕೊಡುತ್ತಾ ತಿಳಿಸಿದರು

ಸಂಪತ್ತು ವಶ

ನಾಗಪುರ — ಓರ್ವ ಕೈಗಾರಿಕೋದ್ಯಮಿಯ ನಿವಾಸದಿಂದ ಆದಾಯ ತೆರಿಗೆಯ ಅಧಿಕಾರಿಗಳು ರೂ 10.69 ಲಕ್ಷ ಬೆಲೆ ಹಣ, ಭಂಗಾರ ಮತ್ತು ಅಭರಣಗಳನ್ನು ವಶಪಡಿಸಿಕೊಂಡರು.

★

ಹರತಾಳ ನಿರ್ಧಾರ

ವೆಲ್ಲೂರು — 1 ಸಾವಿರ ಕೈ ತಯಾರಿಕೆ ಬೀಡಿಯ ಮೇಲೆ ರೂ 1 ಅಬ್ಕಾರಿ ತೆರಿಗೆಯನ್ನು ವಿಧಿಸಿರುವುದನ್ನು ಪ್ರತಿಭಟಿಸಿ, ತಿರುಚಿ ಮುಂತಾದ ಕೆಲವು ಸ್ಥಳಗಳ ಬೀಡಿಯ ತಯಾರಕರ ಸಂಘವು ಬುಧವಾರ ಸಾಂಕೇತಿಕ ಹರತಾಳ ಆಚರಿಸಲು ನಿರ್ಧರಿಸಿವೆ.

★

ಧರಣಾಯಿತಿ ಪ್ರಾಕ್ಟೀಸ್

ಹೈದರಾಬಾದು — ಚಂಬಾಲ್ ಕಣಿವೆಯ ಓರ್ವ ಆ ಪದವೀಧರ, ತನ್ನ ಗ್ರಾಮದಲ್ಲಿ ಸರ್ವರೂ ಧರಣಾಯಿತರಾಗಿರುವುದರಿಂದ, ತಾನು ಆ ಪ್ರಾಕ್ಟೀಸ್ ಮಾಡಿದೆ ಧರಣಾಯಿತ ಪ್ರಾಕ್ಟೀಸ್ ಮಾಡುವುದಾಗಿ ಹೇಳಿದನಂತೆ

●

ಶ್ರೀ ತಾರಿ ಹೋಟೇಲು

ಮೈಸೂರು — ಪ್ರವಾಸಿ ಅಭಿವೃದ್ಧಿ ಕಾರ್ಪೊರೇಷನ್ ಈ ತಿಂಗಳು 16 ರಂದು ಮೈಸೂರಿನ ಸುತ್ತಮುತ್ತ ಆಕರ್ಷಣೀಯ ಸ್ಥಳಗಳಿಗೆ ದಿನವೂ ಪ್ರವಾಸ ಏರ್ಪಡಿಸಿರುವುದೆಂದು ಕಾರ್ಪೊರೇಷನ್ ಅಧ್ಯಕ್ಷ ಶ್ರೀ ಅಜೀಜ್ ಸೇಟ್ ತಿಳಿಸಿದರು ಮಾಡರನ್ ಹಿಂದೂ ಹೋಟೆಲು ಕ್ಷಿಪ್ರದಲ್ಲಿ ಶ್ರೀ ತಾರಿ ಹೋಟೆಲು ಆಗಿ ಪರಿವರ್ತಿಸಲ್ಪಟ್ಟು ಈ ಟ್ರೊರೇಷನ್ ನಡೆಸುವುದೆಂದು ಅವರು ತಿಳಿಸಿದರು.

ಪುಸ್ತಕದ ಹೊದಿಕೆ ಮೇಲೆ ವಿದ್ಯಾಮಂತ್ರಿಗಳ ಭಾವಚಿತ್ರ

ಜೊಗಳೂರು— ಪುಸ್ತಕದ ಹೊದಿಕೆ ಮೇಲೆ ಮಾಜಿ ವಿದ್ಯಾಮಂತ್ರಿಗಳ ಭಾವ ಚಿತ್ರವಿದ್ದು, ರೂ. 30 ಬೆಲೆಯದಾಗಿರುವ ಪುಸ್ತಕವನ್ನು ವಿದ್ಯಾ ಇಲಾಖೆಯವರಿ ಹೈಸ್ಕೂಲು ಲೈಬ್ರರಿಗಳಿಗೆ ಕೊಂಡುಕೊಳ್ಳಲು ಶಿಫಾರಸು ಮಾಡಿರುವರೆಂದು ಶಾಸಕ ಸಭೆಯಲ್ಲಿ ಶ್ರೀ ಹಣಿಪ್ ಜಾರವರು ತಿಳಿಸಿ, ಆ ಪುಸ್ತಕವನ್ನು ಪ್ರದರ್ಶಿಸಿದರು.

ಉಪಾಧ್ಯಾಯರ ಮುಷ್ಕರ

ಕೊಟ್ಟಯಂ— ತಾ ॥ 12 ರಿಂದ ಕೇರಳದ 125000 ಉಪಾಧ್ಯಾಯರು ಅನಿರ್ದಿಷ್ಟ ಮುಷ್ಕರ ಹೂಡಲು ಸಂಬಂಧಪಟ್ಟ ಸಂಘ ಕರೆಕೊಟ್ಟಿದೆ.

ಮೂತ್ರಜನಕಾಂಗದ ಉದಾರದಾನ

ಬೊಂಬಾಯಿ— ಇಲ್ಲಿಯ ವಿದ್ಯುಚ್ಛಕ್ತಿ ಇಂಜಿನಿಯರು ಅವಿವಾಹಿತ 37 ವರ್ಷ ದ ಶ್ರೀ ವಿ. ಜಿ ಜಾಸೆಯವರು ತಮ್ಮ ಮೂತ್ರಜನಕಾಂಗವನ್ನು, ಮೂತ್ರಕೋಶ ಜಾಯಿಲೆಯಿಂದ ಪರಲೋಕಸ್ಥರಾಗುತ್ತಿದ್ದ ಮಹಿಳೆಯೊಬ್ಬಳಿಗೆ ಹೊಂದಿಸಿ, ಹೊಂದಿಸಿ ಮತ್ತು ಮೂರು ಮುಖ್ಯ ಒಬ್ಬ ಕೇಡಿಯೋ ಇಂಜಿನಿಯರರಿಗೆ ಉದಾರದಾನ ಮಾಡಿದರು — ಜಾಸಲಾಕ್ ಆಸ್ಪತ್ರೆಯಲ್ಲಿ ಕಸಿಮಾಡಲಾಯಿತು

ವಚನಾಮೃತ

ಬೇವಿನ ಬೀಜವ ಬಿತ್ತಿ, ಬೆಲ್ಲದ ಕಟ್ಟೆಯ ಕಟ್ಟಿ
ಅಕಳ ಹಾಲನೆರೆದು, ಜೇನುತುಪ್ಪವ ಹೊಯ್ದರೆ
ಸಿಹಿಯಾಗಬಲ್ಲುದೆ, ಕಹಿಯಹುದಲ್ಲದೆ ?
ಶಿವಭಕ್ತರಲ್ಲದವರ ಕೂಡೆ ನುಡಿಯಲಾಗದು,
ನಡೆಯಲಾಗದು ಕೂಡಲಸಂಗಮದೇವಾ

— ಬಸವಣ್ಣನವರು (ವಿಶ್ವಕಲ್ಯಾಣ)

ವುಡ್‌ಲಾಂಡ್ಸ್ 7 3 75 ರಿಂದ

ಅಮೋಘ 2 ನೇ ವಾರ

ದಾರಿ ತಪ್ಪಿದ ಮಗ

ಅಪೂರ್ವ ಕನ್ನಡ ಕಲಾಕೃತಿ ಪಾತ್ರ– ರಾಜಕುಮಾರ್ (ದ್ವಿಪಾತ್ರದಲ್ಲಿ)

ವಜ್ರಮುನಿ, ಅಶ್ವತ್ಥ್, ಬಾಲಕೃಷ್ಣ, ಕಲ್ಪನ, ಆರತಿ ದಿನ 3 ಪ್ರದರ್ಶನಗಳು

ಅಪೇರಾ 7 3 75 ರಿಂದ

ಅಪರಾಧಿ

★

ಅಮೋಘ ಹಿಂದಿ ಕಲರ್ ಚಿತ್ರ

ಪಾತ್ರ – ಯೋಗೀಶಬಾಲಿ ಕೇರಣಕುಮಾರ್ ದಿನ 3 ಪ್ರದರ್ಶನಗಳು

SHAKTI SUDHA

A Superb Tonic

Contribute Liberally

to the National Defence Fund

Quality Printing Neat Binding

Lakshminarasimha Press

Sivarampet Mysore 1

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ



Protect the Cow

Help The Gorakshana

—Humanitarian Propoganda Monthly—

Edited Printed and Published by Dharmadhacharaanirata M S. Krishna Rao (Proprietor) at the Satyavani Press, Chamarajaputam Mysore